ಮೈಸೂರು ನಗರ ಸರ್ಕಾರಿ ರೇಷ್ಮೆ ಕಾರ್ಖಾನೆ ಬಗ್ಗೆ

೯೩೦ ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ) ಮಾನ್ಯ ರೇಷ್ಮೆ, ಪಶುಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರ ಸರ್ಕಾರಿ ರೇಷ್ಮೆ ಕಾರ್ಖಾನೆ (ಕೆಎಸ್‌ಐಸಿ) ಆರಂಭವಾಗಿ ಎಷ್ಟು ವರ್ಷಗಳಾಯಿತು ಮತ್ತು ಈಗ ಎಷ್ಟು ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ?

ಆ) ಕಳೆದ ಮೂರು ವರ್ಷಗಳಲ್ಲಿ ವರ್ಷಂಪ್ರತಿ ಈ ಕಾರ್ಖಾನೆಯು ಗಳಿಸಿದ ಲಾಭವೆಷ್ಟು ?

ಇ) ಈ ಕಾರ್ಖಾನೆಯು ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕ್ ಎಷ್ಟು ಸಾಲವನ್ನು ನೀಡಿದೆ ? ಹಾಗೂ ನಡೆದಿರುವ ಅಭಿವೃದ್ಧಿ ಕಾರ್ಯಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು).-

ಅ ಮೈಸೂರು ನಗರ ಸರ್ಕಾರಿ ರೇಷ್ಮೆ ಕಾರ್ಖಾನೆಯು ಆರಂಭವಾಗಿ ೫೬ ವರ್ಷಗಳಾಯಿತು. ಮತ್ತು ಈಗ ೧೭೦೯ ಮಂದಿ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ಈ ಘಟಕವನ್ನು ದಿನಾಂಕ ೧-೯-೧೯೮೬ ರಿಂದ ರೇಷ್ಮೆ ಇಲಾಖೆಯಿಂದ ತನ್ನ ವಶಕ್ಕೆ ತೆಗೆದುಕೊಳ್ಳಲಾಯಿತು.

ಆಕಳೆದ ಮೂರು ವರ್ಷಗಳಲ್ಲಿ ವರ್ಷಂಪ್ರತಿ ಈ ಕಾರ್ಖಾನೆಯು ಗಳಿಸಿದ ಲಾಭವು ಕೆಳಕಂಡಂತಿದೆ

೧೯೮೩-೮೪	೧೯೮೪-೮೫	೧೯೮೫-೮೬
+೫.೮೧	—೫೮.೧೫	+೧೭.೮೪

+ಲಾಭ —ನಷ್ಟ (ರೂ. ಲಕ್ಷಗಳಲ್ಲಿ)

ಇ ವಿಶ್ವ ಬ್ಯಾಂಕ್ ರೂ. ೩೩೩.೭೫ ಲಕ್ಷಗಳ ಆರ್ಥಿಕ ನೆರವನ್ನು ಈ ಕಾರ್ಖಾನೆಯ ಅಭಿವೃದ್ಧಿಗಾಗಿ ನೀಡಿದೆ. ಹಾಗೂ ನಡೆದಿರುವ ಅಭಿವೃದ್ಧಿ ಕಾರ್ಯಗಳು ಕೆಳಕಂಡಂತಿವೆ :

೧) ನವೀಕರಣ ಹಾಗೂ ವಿಸ್ತರಣಾ ಯೋಜನೆಯನ್ನು ಸಫಲವಾಗಿ ಅಳವಡಿಸಲಾಗಿದೆ.

೨) ಆತ್ಮಾಧುನಿಕವಾದ ೮೫ ಆರೆ ಸ್ವಯಂಚಾಲಿತ (ವಿದ್ಯುತ್) ಮಗ್ಗಗಳನ್ನು ಈಗಾಗಲೇ ಸ್ಥಾಪಿಸಲಾಗಿದ್ದು ವಾಣಿಜ್ಯಾತ್ಮಕ ಉತ್ಪಾದನೆಯು ಪ್ರಾರಂಭವಾಗಿದೆ.

೩) ಒಂದು ಆಧುನಿಕ ವಸ್ತ್ರಗಳ ಮುದ್ರಣಾ ಘಟಕವನ್ನು ಕೂಡ ಸ್ಥಾಪಿಸಲಾಗಿದೆ.

೪) ಇದಲ್ಲದೆ ಮಾರುಕಟ್ಟೆಯಲ್ಲಿ ವಸ್ತ್ರಗಳ ಬೇಡಿಕೆಯನ್ನು ಹೆಚ್ಚಿಸಲು ಆತ್ಮಾಧುನಿಕ ತಂತ್ರಜ್ಞಾನವುಳ್ಳ ವಸ್ತ್ರ ಸಂಸ್ಕರಣ ಘಟಕವನ್ನು ಸಧ್ಯದಲ್ಲೇ ಸ್ಥಾಪಿಸಲಾಗುವುದು.

ಮೈಸೂರಿನ ಗಂಧದೆಣ್ಣೆ ಕಾರ್ಖಾನೆಯ ಬಗೆಗೆ

೯೩೯ ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ) ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿರುವ ಸರ್ಕಾರಿ ಗಂಧದೆಣ್ಣೆ ಕಾರ್ಖಾನೆಯು ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ?

ಆ) ಕಳೆದ ಮೂರು ವರ್ಷಗಳಲ್ಲಿ ಗಂಧದ ಎಣ್ಣೆ ಹಾಗೂ ಅದರ ಉತ್ಪನ್ನಗಳ ಮಾರಾಟದಿಂದ ಕಾರ್ಖಾನೆಯು ವರ್ಷಂಪ್ರತಿ ಗಳಿಸಿರುವ ಹಣವೆಷ್ಟು ?

ಇ) ಗಂಧದ ಎಣ್ಣೆ ತಗೆದಾದ ಮೇಲೆ ಉಳಿಯುವ ಗಂಧದ ಪುಡಿಯನ್ನು ಯಾವ ಕಾರ್ಯಕ್ಕಾಗಿ ಉಪಯೋಗಿಸಲಾಗುವುದು ಹಾಗೂ ಹೇಗೆ ವಿತರಣೆ ಮಾಡಲಾಗುತ್ತಿದೆ.